ಅಸಲು ದಾವಾ ಸಂಖ್ಯೆ **183 – 2016 .** ಡಿ ಡಬ್ಲ್ಯೂ- **1**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **11.03.2025**

ಮುಂದುವರಿದ ಪಾಟೀ ಸವಾಲು ಶ್ರೀ ಎಂ.ಇ ಹೆಚ್ ವಾದಿ ಪರ ನ್ಯಾಯಾವಾದಿಗಳಿಂದ

ದಾವಾ ಆಸ್ತಿ ಸಂಖ್ಯೆ 1 ಅನ್ನು ನನ್ನ ಮಾವ ಸಿಂಗ್ರಿಗೌಡರವರು ದಿಃ13.02.1960 ರ ನೊಂದಾಯಿತ ಕ್ರಯ ಪತ್ರದ ಮುಖಾಂತರ ಉಗ್ರೇಗೌಡರ ಮಗ ರಾಮೇಗೌಡರವರಿಂದ ಕ್ರಯಕ್ಕೆ ಪಡೆದರು ಎಂದರೆ ಸರಿ. ಸದರಿ ಕ್ರಯ ಪತ್ರದ ದೃಢಿಕೃತ ಪ್ರತಿಯನ್ನು ಈಗ ನೋಡುತ್ತಿದ್ದೇನೆ . ಸದರಿ ಕ್ರಯ ಪತ್ರದ ದೃಢಿಕೃತ ಪತ್ರವನ್ನು ನಿಪಿ.13 ಎಂದು ಗುರುತಿಸಲಾಯಿತು.

2. ನಿಪಿ.13 ರ ಕ್ರಯ ಪತ್ರದ ಪ್ರಕಾರ ನನ್ನ ಮಾವನ ಹೆಸರಿಗೆ ದಾವಾ ಆಸ್ತಿ ಸಂಖ್ಯೆ 1 ರ ಖಾತೆ ಬಂದಿರುತ್ತದೆ ಎಂದರೆ ಸರಿ. ನನ್ನ ಮಾವನ ಇಬ್ಬರು ಹೆಂಡತಿಯರು ಈಗ ನೋಡುತ್ತಿರುವ ದಿಃ 09.01.1987 ರ ನೊಂದಾಯಿತವಲ್ಲದ ಪಂಚಾಯ್ತಿ ಪಾಲು ಪಟ್ಟಿ ಮುಖಾಂತರ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿ ನೋಡಿ ಒಪ್ಪಿಕೊಂಡ ದಿಃ 09.01.1987 ರ ನೋಂದಾಯಿತವಲ್ಲದ ಪಂಚಾಯ್ತಿ ಪಾಲು ಪಟ್ಟಿಯನ್ನು ನಿಪಿ.14 ಎಂದು ಗುರುತಿಸಲಾಯಿತು. ನನ್ನ ಮಾವ ಸಿಂಗ್ರೀಗೌಡರವರು ಕ್ರಯಕ್ಕೆ ಪಡೆದ ದಾವಾ ಆಸ್ತಿ ಸಂಖ್ಯೆ 1 ಯಾರ ಹಿಸ್ಸೆಗೆ ಹೋಗಿದೆ ಎಂದು ನಿಪಿ.14 ಪಂಚಾಯ್ತಿ ಪಾರಿಕತ್ತಿನಲ್ಲಿ ದಾವಾ ಆಸ್ತಿ ಸಂಖ್ಯೆ 1 ರವರ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಮಾವ ಸಿಂಗ್ರೀಗೌಡರ ಹಿಸ್ಸೆಗೆ ಹೋಗಿರುವುದಾಗಿ ನುಡಿಯುತ್ತಾರೆ. ನಿಪಿ14 ರ ಪಂಚಾಯ್ತಿ ಪಾರಿಕತ್ತಿನ ಪ್ರಕಾರ ನನ್ನ ಮಾವ ಸಿಂಗ್ರೀಗೌಡರಿಗೆ 05 ತಾಕು ಜಮೀನುಗಳು ಬಂದಿರುತ್ತವೆ.

3. ನನ್ನ ಮಾವ ಸಿಂಗ್ರೀಗೌಡರವರು ದಾವಾ ಆಸ್ತಿ ಸಂಖ್ಯೆ 1 ಅನ್ನು ಕೆಂಪಮ್ಮ ರವರ ಮಗಳು ನಾಗಮ್ಮರವರಿಗೆ ಧಾನ ಮಾಡಿರುವುದು ನನಗೆ ಗೊತ್ತಿಲ್ಲ. ನನ್ನ ಮಾವ ಸಿಂಗ್ರೀಗೌಡರವರು ತನ್ನ ಜೀವಿತ ಅವಧಿಯಲ್ಲಿ ತನ್ನ ಹಿಸ್ಸೆಗೆ ಬಂದ ಜಮೀನುಗಳ ಪೈಕಿ ಉಳಿಕೆ 4 ಜಮೀನಿಗಳಿಗೆ ಸಂಬಂಧಿಸಿದಂತೆ ಬೇರೆ ಯಾರಿಗಾದರು ಪತ್ರವನ್ನಾಗಲೀ ಅಥವಾ ಖಾತೆಯನ್ನಾಗಲೀ ಮಾಡಿಸಿರುವುದು ನನಗೆ ಗೊತ್ತಿಲ್ಲ.

4. ನನ್ನ ಮಾವ ಸಿಂಗ್ರೀಗೌಡರವರು ಎಷ್ಟು ವರ್ಷಗಳ ಹಿಂದೆ ಮರಣ ಹೊಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮಾವ ಸಿಂಗ್ರೀಗೌಡರವರು ಮರಣ ನಂತರ ಅವರ ಹಿಸ್ಸೆಗೆ ಬಂದ ಜಮೀನುಗಳ ಪೈಕಿ 2 ಜಮೀನುಗಳಿಗೆ ಸಂಬಂಧಿಸಿದಂತೆ ಚಿಕ್ಕತಾಯಮ್ಮರವರ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ. ಉಳಿಕೆ 3 ಜಮೀನುಗಳು ಯಾರ ಹೆಸರಿಗೆ ಖಾತೆ ವರ್ಗಾವಣೆಯಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಮಾವ ಸಿಂಗ್ರೀಗೌಡರವರ ಮರಣ ನಂತರ ಅವರ ಹಿಸ್ಸೆಗೆ ಬಂದ ಜಮೀನುಗಳಿಗೆ ಸಂಗಂಧಿಸಿದಂತೆ ಸಿಂಗ್ರೀಗೌಡರ ಇಬ್ಬರು ಹೆಂಡತಿ ಮತ್ತು ಮಕ್ಕಳ ಹೆಸರಿಗೆ ಜಂಟಿ ಖಾತೆ ಮಾಡಿಸಲು ತೊಂದರೆ ಇತ್ತ ಎಂದರೆ ಸಾಕ್ಷಿಯು ಆ ಬಗ್ಗ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ನಾನು ದಾವಾ ಆಸ್ತಿಗಳನ್ನು ಕ್ರಯಕ್ಕೆ ಪಡೆಯುವ ಮುಂಚೆ ಚಿಕ್ಕತಾಯಮ್ಮರವರ ಹೆಸರಿನಲ್ಲಿ ಇದ್ದ ಎಂ. ಆರ್ . ನಂಬರು ಐ.ಹೆಚ್.ಸಿ 6/1998-99 ಅನ್ನು ನೋಡಿರುತ್ತೇನೆ ಸಾಕ್ಷಿಯು ಮುಂದುವರೆದು

ಚಿಕ್ಕತಾಯಮ್ಮರವರು ದಾವಾ ಆಸ್ತಿಗಳಲ್ಲಿ ಅನುಭೋಗದಲ್ಲಿ ಇದ್ದುದ್ದನ್ನು ತಾನು ನೋಡಿರುವುದಾಗಿ ನುಡಿಯುತ್ತಾರೆ. ವಾರಸ್ಸು ಮುಖಾಂತರ ಚಿಕ್ಕತಾಯಮ್ಮರವರ ಹೆಸರಿಗೆ ದಾವಾ ಆಸ್ತಿಗಳ ಖಾತೆಯು ವರ್ಗಾವಣೆಯಾಗಿರುವುದರಿಂದ ಸಿಂಗ್ರೀಗೌಡರವರ ಮೊದಲನೇ ಹೆಂಡತಿ ಕೆಂಪಮ್ಮ ಮತ್ತು ಅವರ ಮಕ್ಕಳಿಗೂ ದಾವಾ ಆಸ್ತಿಗಳ ಮೇಲೆ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

6. ಕ್ರಯಕ್ಕೆ ಪಡೆಯುವಾಗ ಸಿಂಗ್ರೀಗೌಡರ ಮೊದಲನೆ ಹೆಂಡತಿ ಕೆಂಪಮ್ಮ ಮತ್ತು ಅವರ ಮೊದಲನೆ ಹೆಂಡತಿ ಮಕ್ಕಳು ಹಾಗೂ 2 ನೇ ಹೆಂಡತಿ ಮಕ್ಕಳ ಸಹಿಯನ್ನು ಪಡೆಯಲು ನನಗೆ ಏನು ತೊಂದರೆ ಇರಲಿಲ್ಲ, ಸಾಕ್ಷಿ ಮುಂದುವರೆದು ಚಿಕ್ಕತಾಯಮ್ಮರವರು ದಾವಾ ಆಸ್ತಿಗಳಲ್ಲಿ ಅನುಭೋಗದಲ್ಲಿ ಇರುವುದನ್ನು ನೋಡಿ ನಾನು ಚಿಕ್ಕತಾಯಮ್ಮರವರಿಂದ ಕ್ರಯಕ್ಕೆ ಪಡೆದಿರುವುದಾಗಿ ನುಡಿಯುತ್ತಾರೆ.

7. ಪತ್ರದಲ್ಲಿ ಕ್ರಯ ಎಂದು ಬರೆಯಾಲಗಿರುವುದಿಲ್ಲ , ಧಾನ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ನಾನು ಪತ್ರವನ್ನು ತೆಗೆದುಕೊಟ್ಟಿದ್ದು ನಾನು ಹೋಗುವಷ್ಟರಲ್ಲೇ ಧಾನ ಎಂದು ಪತ್ರವನ್ನು ಬೆರಳಚ್ಚು ಮಾಡಿಸಿದ್ದರು, ನಾನು ಹಣ ಕೊಟ್ಟು ಕ್ರಯಕ್ಕೆ ಪಡೆಯುತ್ತಿದ್ದೇನೆ ಹಾಗಾಗಿ ಕ್ರಯ ಪತ್ರವೆಂದು ಬೆರಳಚ್ಚು ಮಾಡಿ ಎಂದು ಹೇಳಿರುತ್ತೇನೆ, ಆದರೆ ಈಗಾಗಲೇ ಬೆರಳಚ್ಚು ಮಾಡಿರುವುದರಿಂದ ಪತ್ರವು ವ್ಯರ್ಥವಾಗುತ್ತದೆ ಎಂದು ಹೇಳಿ ಬೆರಳಚ್ಚು ಮಾಡಿರುವುದನ್ನು

ಹೊಡೆದುಹಾಕಿ ಮತ್ತೊಮ್ಮೆ ಕ್ರಯ ಪತ್ರವೆಂದು ಬೆರಳಚ್ಚು ಮಾಡಿರುವುದಾಗಿ ನುಡಿಯುತ್ತಾರೆ.

8. ನಾನು ಈಗ ನಿವೃತ್ತ ಸರ್ಕಾರಿ ನೌಕರ ಎಂದರೆ ಸರಿ. ಕ್ರಯ ಪತ್ರವು ನೊಂದಾಣಿಯಾಗುವ ವೇಳೆಗೆ ಸಮಯ ಸುಮಾರು 3.00 ಗಂಟೆ ಆಗಿತ್ತು. ಬೆರಳಚ್ಚು ಮಾಡಿಸಲು ಪತ್ರವನ್ನು ನಾನೇ ಪತ್ರ ಬರಹಗಾರರಿಗೆ ತಂದು ಕೊಟ್ಟಿರುತ್ತೇನೆ. ಆ ರೀತಿ ಪತ್ರವನ್ನು ತಂದುಕೊಡುವಾಗ ಸಮಯ ಸುಮಾರು ಬೆಳಗ್ಗೆ 11-30 ರಿಂದ 12.00 ಗಂಟೆ ಆಗಿತ್ತು. ಆ ರೀತಿ ಪತ್ರವನ್ನು ತಂದು ಕೊಟ್ಟು ನಾನು ನನ್ನ ಕರ್ತವ್ಯಕ್ಕೆ ಹಾಜರಾಗಿದ್ದೇ ಎಂದರೆ ಸರಿ. ಕ್ರಯ ಪತ್ರವು ನೊಂದಾಣಿಯಾಗುವ ದಿನ ನಾನು ನನ್ನ ಕರ್ತವ್ಯಕ್ಕೆ ಹಾಜರು ಆಗಿದ್ದೆ ಎಂದರೆ ಸಾಕ್ಷಿಯು ರಜೆ ತೆಗೆದುಕೊಂಡಿದ್ದೆ ಎಂದು ನುಡಿಯುತ್ತಾರೆ.

9. ಕ್ರಯ ಪತ್ರದಂತೆ ನನ್ನ ಹೆಸರಿಗೆ 2021-22 ನೇ ಸಾಲಿನಲ್ಲಿ ದಾವಾ ಆಸ್ತಿಗಳ ಖಾತೆಯು ವರ್ಗಾವಣೆಯಾಗಿರುತ್ತದೆ. ದಾವಾ ಆಸ್ತಿಗಳನ್ನು ಮಾರಾಟ ಮಾಡುವ ಸಂಪೂರ್ಣ ಹಕ್ಕು ಚಿಕ್ಕತಾಯಮ್ಮರವರಿಗೆ ಇರಲಿಲ್ಲ ಅದೇ ರೀತಿ ನನಗೆ ದಾವಾ ಆಸ್ತಿಗಳನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ಮಾವ ಸಿಂಗ್ರೀಗೌಡರವರಿಗೆ ಸ್ವಯಾರ್ಜಿತ ಆಸ್ತಿಯಾಗಿದ್ದು ತನ್ನ ಜೀವಿತ ಅವಧಿಯಲ್ಲಿ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ತನ್ನ ಮಗಳ ನಾಗಮ್ಮ ರವರಿಗೆ ಧಾನ ಮಾಡಿರುವುದು ನನಗೆ ಗೊತ್ತಿಲ್ಲ. ಈ ರೀತಿ ದಾವಾ ಆಸ್ತಿಗಳನ್ನು ಧಾನ ಮಾಡಿದ್ದರಿಂದ ನಿಪಿ.14 ರಂತೆ ಪಂಚಾಯ್ತಿ ಪಾರಿಕತ್ತು

ಮಾಡಿಕೊಳ್ಳುವಾಗ ದಾವಾ ಆಸ್ತಿಗಳನ್ನು ನಿಪಿ.14 ರಲ್ಲಿ ಸೇರಿಸಿರಲಿಲ್ಲ ಎಂದರೆ ಸರಿಯಲ್ಲ.

10. ನನ್ನ ಮಾವ ಸಿಂಗ್ರೀಗೌಡರವರ ಮರಣ ನಂತರ ನಾನು ಚಿಕ್ಕತಾಯಮ್ಮರವರ ಅಳಿಯನಾಗಿದ್ದರಿಂದ ನಾನು ಮತ್ತು ಚಿಕ್ಕತಾಯಮ್ಮ ಶರೀಕ್ ಆಗಿ ಚಿಕ್ಕತಾಯಮ್ಮರವರ ಹೆಸರಿಗೆ ಅಕ್ರಮವಾಗಿ ಖಾತೆ ಮಾಡಿಸಿ ಅವರಿಂದ ನಾನು ಕ್ರಯ ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

11. ಈ ದಾವೆಯ ದಾವ ಸ್ವತ್ತುಗಳಿಗೆ ಸಂಬಂಧಿಸಿದಂತೆ ನನ್ನನ್ನು ಮಾಲೀಕನೆಂದು ಘೋಷಿಸುವಂತೆ ಮತುತ ನನ್ನ ಸ್ವಾಧಿನಾನುಭವಕ್ಕೆ ತೊಂದರೆ ಕೊಡದಂತೆ ಶಾಶ್ವತ ನಿರ್ಬದಕಾಜ್ಞೆ ಪರಿಹಾರವನ್ನು ಕೋರಿ ಅಸಲು ದಾವಾ ಸಂಖ್ಯೆ 146/2008 ರಂತೆ ಮರಿಸ್ವಾಮಿ ಮತ್ತು ಕುಮಾರ್ ರವರ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಗೆ ಹಾಜರಾಗಿ ಸಾಕ್ಷ್ಯವನ್ನು ಕೊಡದ ಕಾರಣ ದಿಃ06.04.2015 ರಂದು ವಜಾ ಗೊಂಡಿರುತ್ತದೆ ಎಂದರೆ ಸರಿ. ಆ ರೀತಿ ಸದರಿ ದಾವೆಯು ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿ ಇರುವಾಗ ದಿಃ 16.08.2014 ರಂದು ದಾವಾ ಆಸ್ತಿಗಳನ್ನು ನಿಪಿ.7 ರಂತೆ 2 ನೇ ಪ್ರತಿವಾದಿಗೆ ಕ್ರಯ ಮಾಡಿರುತ್ತೇವೆ ಎಂದರೆ ಸರಿ. ನಾನು ಮನೆಯನ್ನು ಖರೀದಿಸಬೇಕಾದ್ದರಿಂದ ನಿಪಿ.7 ರಂತೆ ದಾವಾ ಆಸ್ತಿಗಳನ್ನು ಮಾರಾಟ ಮಾಡಿರುತ್ತೇನೆ.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ